46

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/19/2015-16. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಸಿದ್ದಿಂಗಮ್ಮ ಗಂಡ ಲೇಟ್ ಕೆ.ಸಿದ್ದಪ್ಪ<br>2)ಕೆ.ಪಿ.ಶಿವಲಿಂಗಪ್ಪ ತಂದೆ ಲೇಟ್ ಕೆ.ಸಿದ್ದಿಂಗಪ್ಪ<br>3)ಕೆ.ಪಿ.ಮಂಜುನಾಥ ತಂದೆ ಲೇಟ್ ಸಿದ್ದಿಂಗಪ್ಪ<br>4)ನಾಗಪ್ಪ ತಂದೆ ಲೇಟ್ ಕೆ.ಸಿದ್ದಿಂಗಪ್ಪ<br>5)ಸಣ್ಣ ಸಿದ್ದಪ್ಪ ತಂದೆ ಲೇಟ್ ಕೆ.ಸಿದ್ದಿಂಗಪ್ಪ<br>ಸೂಲದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 659/1. ವಿಸ್ತೀರ್ಣ 4-68. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 659/1. ವಿಸ್ತೀರ್ಣ 4-68. ಎಕ್ರೆ ಜಮೀನನ್ನು.ಸದರಿ ಗ್ರಾಮದ ಸಣ್ಣ ಸಿದ್ದಪ್ಪ ತಂದೆ ಲೇಟ್ ಕೆ.ಸಿದ್ದಿಂಗಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಸೂಲದಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 26-12-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರು ಮರಣ ಪ್ರಮಾಣ ಪತ್ರವನ್ನು ದೃಡಿಕರಿಸಿ ಲಗತ್ತಿಸಿಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 30/2014-5. ದಿನಾಂಕ 28-01-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 23-06-2015 ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಸೂಲದಹಳ್ಳಿ ಗ್ರಾಮದ ಸನಂ 659/1. ವಿಸ್ತೀರ್ಣ 4-68. ಎಕ್ರೆ ಜಮೀನು ನಮ್ಮ ತಂದೆಯವರಾದ ಕುರುಬರ ಸಿದ್ದಿಂಗಪ್ಪ ತಂದೆ ಸಿದ್ದಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 01-05-1980 ರಂದು ಹಾಗೂ ನನ್ನ ತಾಯಿಯಾದ ಕರಿಯಮ್ಮ ಗಂಡ ಸಿದ್ದಿಂಗಪ್ಪ ಇವರು ದಿನಾಂಕ 25-03-2004 ರಂದು ಹಾಗೂ ನಮ್ಮ ಅಣ್ಣನಾದ ಕೆ.ಸಿದ್ದಪ್ಪ ತಂದೆ ಸಿದ್ದಿಂಗಪ್ಪ ಇವರು ದಿನಾಂಕ 19-10-1989 ರಂದು ಹಾಗೂ ಇನ್ನೊಬ್ಬ ಅಣ್ಣ ಕೆ.ಸಿದ್ದಿಂಗಪ್ಪ ತಂದೆ ಲೇಟ್ ಸಿದ್ದಿಂಗಪ್ಪ ಇವರು ದಿನಾಂಕ 28-10-1998 ರಂದು ಇವರ ಹೆಂಡತಿ ಕೆಂಚಮ್ಮ ಗಂಡ ಲೇಟ್ ಸಿದ್ದಿಂಗಪ್ಪ ಇವರು ದಿನಾಂಕ 11-02-2002 ರಂದು ಮರಣ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಬಗ್ಗೆ ಕಂದಾಯ ಪರಿವೀಕ್ಷಕರು ಮತ್ತು ಗ್ರಾಮಲೆಕ್ಕಿಗರು ಗ್ರಾಮದಲ್ಲಿ ಮರು ವಿಚಾರಣೆ ಮಾಡಲಾಗಿ. ಪೋತಿವಾರಸು ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇಲ್ಲವೆಂದು ವರದಿ ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 659/1. ವಿಸ್ತೀರ್ಣ 4-68. ಎಕ್ರೆ ಜಮೀನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಸಿದ್ಲಿಂಗಮ್ಮ ಗಂಡ ಲೇಟ್ ಸಿದ್ದಪ್ಪ. ಕೆ.ಪಿ.ಶಿವಲಿಂಗಪ್ಪ ತಂದೆ ಲೇಟ್ ಕೆ.ಸಿದ್ಲಿಂಗಪ್ಪ. ಕೆ.ಪಿ.ಮಂಜುನಾಥ ತಂದೆ ಲೇಟ್ ಕೆ.ಸಿದ್ಲಿಂಗಪ್ಪ. ನಾಗಪ್ಪ ತಂದೆ ಲೇಟ್ ಕೆ.ಸಿದ್ಲಿಂಗಪ್ಪ. ಸಣ್ಣ ಸಿದ್ದಪ್ಪ ತಂದೆ ಲೇಟ್ ಕೆ.ಸಿದ್ಲಿಂಗಪ್ಪ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸಣ್ಣ ಸಿದ್ದಪ್ಪ ತಂದೆ ಲೇಟ್ ಕೆ.ಸಿದ್ಲಿಂಗಪ್ಪ. ಹಾಗೂ ಇತರರು ಸೂಲದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.